

**ಭಾಗ – 1 ಎಂಎಸ್ ಬದುಕಿನ ಸಂಗೀತ**

# ಸುಗ್ಗಿ ಕಾಲಿಟ್ಟು ಚಿಮ್ಮಿತು ಹಕ್ಕಿಹಾಡು

## ನನ್ನ ಬಾಲ್ಯದ ನೆನಪುಗಳು – ಎಂಎಸ್

ನಿರೂಪಣೆ: ಗೌರಿ ರಾಮನಾರಾಯಣ್

ನನ್ನ ಕಥೆ: ಒಂದಾನೊಂದು ಕಾಲದಲ್ಲಿ ನಡೆದ ಘಟನೆಗಳನ್ನು ಅಜ್ಜಿಯರು ಕಥೆ ಕಟ್ಟಿ ಚೆನ್ನಾಗಿ ಹೇಳುತ್ತಾರೆ. ಈಗ ನಾನೂ ಅಜ್ಜಿಯಾಗಿರುವುದರಿಂದ ಒಂದು ಕತೆಯ ಮೂಲಕ ಪ್ರಾರಂಭಿಸುತ್ತೇನೆ.

ಒಂದಾನೊಂದು ಕಾಲದಲ್ಲಿ ಬಹಳ ಹಿಂದೆ ತಮಿಳುನಾಡಿನಲ್ಲಿ ಪಾಂಡ್ಯ ರಾಜ ಮಲಯಧ್ವಜ ಆಳುತ್ತಿದ್ದ. ಅವನ ರಾಜಧಾನಿ ಮಧುರೆ. ಇದು ಭಾರತದ ದಕ್ಷಿಣದಲ್ಲಿರುವ ದೇವಸ್ಥಾನ/ಗೋಪುರಗಳ ನಗರ. ಆ ರಾಜನಿಗೆ ಬಯಸಿದ್ದೆಲ್ಲವೂ ಇತ್ತು. ಆದರೆ ಮನಸ್ಸಿಗೆ ಸಂತೋಷ ಕೊಡುವುದಕ್ಕೆ ಮಕ್ಕಳೇ ಇರಲಿಲ್ಲ. ಆದ್ದರಿಂದ ಸಾಧು-ಸಂತರ ಸಲಹೆಯಂತೆ ರಾಜನು ಒಂದು ದೊಡ್ಡ ಯಾಗವನ್ನು ಮಾಡಿದ. ಪುರೋಹಿತರು ವೇದಘೋಷಗಳೊಂದಿಗೆ, ಅರ್ಘ್ಯವನ್ನು ಅಗ್ನಿಗೆ ಅರ್ಪಿಸುತ್ತಿದ್ದಾಗ ಆ ಅಗ್ನಿಜ್ವಾಲೆಗಳ ಮಧ್ಯದಿಂದ ಒಂದು ಪುಟ್ಟ ಹುಡುಗಿ ಹುಟ್ಟಿದಳು. ನಕ್ಷತ್ರಖಚಿತ ಆಕಾಶದಲ್ಲಿ ಹೊಳೆಯುವ ಚಂದ್ರನಂತೆ ಅವಳು ಸುಂದರವಾಗಿದ್ದಳು. ಹೀಗೆ ದೇವಿಯು ಮಧುರೆಯಲ್ಲಿ ಮಾನವ ಜನ್ಮದಲ್ಲಿ ಅವತಾರವೆತ್ತಿದಳು. ಅತಿ ಸಂತೋಷದಿಂದ ರಾಜ ಆ ಮಗುವಿಗೆ ಮೀನಾಕ್ಷಿ ಎಂದು ಹೆಸರಿಟ್ಟನು.

ರಾಜಕುಮಾರಿ ಮೀನಾಕ್ಷಿಯು ಪ್ರಬುದ್ಧಳಾದ ನಂತರ ಪಾಂಡ್ಯ ಸಾಮ್ರಾಜ್ಯವನ್ನು ವಿಸ್ತರಿಸಲು ನಿರ್ಧರಿಸಿದಳು. ಸಮುದ್ರದಷ್ಟು ವಿಶಾಲವಾದ ಸೈನ್ಯವನ್ನು ಸಜ್ಜುಗೊಳಿಸಿ, ವಿಜಯಯಾತ್ರೆಗೆ ಹೊರಟಳು. ಅವಳು ಹೋದಲ್ಲೆಲ್ಲಾ ಜಯಶಾಲಿಯಾದಳು. ಕಡೆಯಲ್ಲಿ ರಾಜಕುಮಾರಿಯು ಹಿಮಾಲಯವನ್ನು ತಲುಪಿದಳು. ಶಿವನ ಕೈಲಾಸಪರ್ವತದ ಮೇಲೆ ದಂಡೆತ್ತಿ ಹೋಗಲು ನಿರ್ಧರಿಸಿದಳು. ಆದರೆ ಶಿವನ ದಿವ್ಯಪ್ರಭೆಯನ್ನು ನೋಡಿದಾಗ, ಅವಳ ಕೈಯಿಂದ ಬಾಣವು ತಂತಾನೇ ಕೆಳಗೆ ಬಿದ್ದು ಹೋಯಿತು. ಮೀನಾಕ್ಷಿಯ ಸೌಂದರ್ಯಕ್ಕೆ ಶಿವನೂ ಮಾರುಹೋದನು. ಅವರು ಮದುವೆಯಾದರು. ಆದರೆ ಅವರ ಮದುವೆ ಹಿಮಾಲಯದಲ್ಲಿ ನಡೆಯಲಿಲ್ಲ, ಮಧುರೆಯಲ್ಲಿ ವಿಜೃಂಭಣೆಯಿಂದ

ನಡೆಯಿತು. ಮೀನಾಕ್ಷಿಯನ್ನು ಗೆಲ್ಲಲು ಶಿವನು ತನ್ನ ಹಾವು ಮತ್ತು ಬೂದಿಯನ್ನು ತ್ಯಜಿಸಬೇಕಾಯಿತು. ಚಿನ್ನದ ಆಭರಣ, ರೇಷ್ಮೆ ಬಟ್ಟೆಗಳಿಂದ ಅಲಂಕೃತನಾದ ಚೆಲುವ ಸುಂದರೇಶ್ವರನು ಪಾಂಡ್ಯ ರಾಜಕುಮಾರಿಗೆ ಅನುರೂಪನಾದ ವರನಾಗಿದ್ದ.

ನನ್ನ ತವರೂರು ಮಧುರೆ ಸಾಮಾನ್ಯವಾದ ಊರಲ್ಲ, ಗೊತ್ತಾಯಿತಾ? ನಾನು ಚಿಕ್ಕವಳಿದ್ದಾಗ, ನನ್ನನ್ನು ಮೀನಾಕ್ಷಿ ದೇವಾಲಯಕ್ಕೆ ಪೂಜೆ ನೋಡಲು ಕರೆದೊಯ್ಯುತ್ತಿದ್ದರು. ಗರ್ಭಗುಡಿಯಲ್ಲಿದ್ದ ಆ ಮಂಗಳಕರ ಮೂರ್ತಿಯನ್ನು ತದೇಕ ದೃಷ್ಟಿಯಿಂದ ದಿಟ್ಟಿಸಿ ನೋಡುತ್ತಿದ್ದೆ. ಅರ್ಚಕರು ಕರ್ಪೂರದಾರತಿಯನ್ನು ದೇವಿಯ ಮುಂದೆ ಬೆಳಗುವಾಗ, ದೇವಿಯ ಸುಂದರ ಕಣ್ಣುಗಳನ್ನೇ ನೋಡುತ್ತಿದ್ದೆ. ಆ ಕಣ್ಣಲ್ಲಿ ಪ್ರೇಮ ಹಾಗೂ ಅಭಯ ತುಂಬಿಕೊಂಡಿತ್ತು. ಸಹಜವಾಗಿಯೇ ಚಿಕ್ಕಂದಿನಿಂದಲೇ ನನಗೆ ಶ್ರದ್ಧೆ, ಭಕ್ತಿ ಬೆಳೆಯಿತು. ಮುಂದೆ ನಾನು ಕಛೇರಿಗಳಲ್ಲಿ ಮೀನಾಕ್ಷಿಯನ್ನು ಮಧುರೆಯ ಊರದೇವತೆಯೆಂದು ಸ್ತುತಿಸಿ, ವರ್ಣಿಸುವ **"ಮಧುರಾಪುರಿ ನಿಲಯೇ"** ಸಾಲನ್ನು ಹಾಡುವಾಗೆಲ್ಲಾ ಚಿಕ್ಕಂದಿನಲ್ಲಿ ನನ್ನನ್ನು ಆಕರ್ಷಿಸಿದ ಅವಳ ನೀಳ, ಸುಂದರ ಕಣ್ಣುಗಳೇ ನೆನಪಿಗೆ ಬರುತ್ತಿದ್ದವು.

ಹತ್ತಿರ ಹತ್ತಿರ ಇಡಿಕಿರಿದಿದ್ದ ಸಾಲುಮನೆಗಳ ಮಧ್ಯೆ ಒಂದು ಸಣ್ಣ ಮನೆಯಲ್ಲಿ ನನ್ನ ಬಾಲ್ಯ ಕಳೆಯಿತು. ನಮ್ಮ ಮನೆ ಹನುಮಂತರಾಯನ ಬೀದಿಯಲ್ಲಿ ಮೀನಾಕ್ಷಿ

ಗೌರಿಗೆ ಕಥೆ ಹೇಳುತ್ತಿರುವ ಎಂಎಸ್ ಅಜ್ಜಿ






ಧುರೆಯಲ್ಲಿ ಎಂಎಸ್ ಅವರ ಮನೆ. ಷಣ್ಮುಗವಡಿವು ಅವರಿಂದಾಗಿ
ಮನೆ ಸಂಗೀತಗಾರರಿಗೆ ಒಂದು ವಿಶೇಷ ಸ್ಥಳವಾಗಿತ್ತು.

ೀವಸ್ಥಾನಕ್ಕೆ ತುಂಬಾ ಹತ್ತಿರದಲ್ಲೇ ಇತ್ತು. ಗಲೂ ಹಾಗೇ ಇದೆ! ಈಗಲೂ ಅದು ಷ್ಟೇ ಇಕ್ಕಟ್ಟಾದ ಧೂಳು ತುಂಬಿದ ಿ. ಅನೇಕ ವೇಳೆ ರಸ್ತೆ ತುಂಬಾ ಬರೀ ಸುಗಳೇ ಇರುತ್ತಿದ್ದವು. ಯಾರಿಗೂ ಜಾಗ ಡದೆ ರಸ್ತೆಯನ್ನು ಆಕ್ರಮಿಸಿಕೊಂಡು ಟ್ಟಿರುತ್ತಿದ್ದವು. ಕಾರು ಹೋಗುವುದಕ್ಕಂತೂ ಗವೇ ಇರುತ್ತಿರಲಿಲ್ಲ. ಹಾರ್ನುಗಳ ದ್ದು, ಜನರ ಕಿರುಚಾಟ ಇವೆಲ್ಲಾ ತಮಗೆ ಳಿಸಿಯೇ ಇಲ್ಲವೆಂಬಂತೆ ಆರಾಮವಾಗಿ ಲುಕು ಹಾಕುತ್ತಾ ಮಲಗಿರುತ್ತಿದ್ದವು.

ಮ್ಮ ತಾಯಿ ಷಣ್ಮುಗವಡಿವು ೀಣಾವಾದಕಿ. ಅವರಿಂದಾಗಿ ನಮ್ಮ ನೆ ಸಂಗೀತಗಾರರಿಗೆ ಒಂದು ವಿಶೇಷ ಳವಾಗಿತ್ತು. ವೀಣೆ ಒಂದು ಪುರಾತನ ದ್ಯ. ದೇವಸ್ಥಾನದಲ್ಲಿರುವ ಸರಸ್ವತಿ ಗ್ರಹಗಳಲ್ಲಿ ಅಥವಾ ಚಿತ್ರಗಳಲ್ಲಿ ಆಕೆ ಕೈಯಲ್ಲಿ ವೀಣೆ ಹಿಡಿದಿರುವುದನ್ನು ನೀವು ನೋಡಬಹುದು. ವೀಣೆಯ ಧ್ವನಿ ತುಂಬಾ ಮಧುರ ಹಾಗೂ ಗಾಢ. ಅದು ಮನಸ್ಸನ್ನು ಶಾಂತಗೊಳಿಸಿ, ಉದಾತ್ತ ಭಾವನೆಗಳನ್ನು ಉದ್ದೀಪಿಸುತ್ತದಂತೆ. ಇದು ಸತ್ಯ ಕೂಡ. ನನ್ನ ತಾಯಿ ಅಭ್ಯಾಸ ಮಾಡಿಕೊಳ್ಳುತ್ತಿದ್ದಾ ಮತ್ತು ಕಛೇರಿಯಲ್ಲಿ ನುಡಿಸುತ್ತಿದ್ದಾಗ ಆ ಶಾಂತ ಭಾವ ನನ್ನಲ್ಲಿ ಮೂಡುತ್ತಿತ್ತು ನನ್ನ ಹೆಸರಿನ ಮುಂದೆ ಇರುವ ಎರಡು ಅಕ್ಷರಗಳು ಎಂ ಮತ್ತು ಎಸ್. ಎಂ ಅಂದರೆ ಮಧುರೆ, ಎಸ್ ಅಂದರೆ ಷಣ್ಮುಗವಡಿವು. ತಾಯಿಯೇ ನನ್ನ ಮೊದ ಸಂಗೀತ ಗುರು. ಇವತ್ತು ನಾನು ಸಂಗೀತಗಾರಳಾಗ ಅವಳೇ ಕಾರಣ.

ನಾವು ಬಡತನದಲ್ಲಿ ಬದುಕುತ್ತಿದ್ದರೂ ಸಂಗೀತದಲ್ಲಿ ಶ್ರೀಮಂತರು. ಸಂಗೀತಮಯ ವಾತಾವರಣದಲ್ಲಿ ನಾನು ಬೆಳೆದೆ. ಮಾತಾಡುವುದಕ್ಕಿಂತ ಹಾಡುವುದೇ ನನಗೆ ಸಹಜವಾಗಿತ್ತು. ನನ್ನದು ತುಂಬಾ ಸಂಕೋಚದ ಸ್ವಭಾವ. ತಾಯಿಯ ಶಿಸ್ತಿನ ಮೇಲುಸ್ತುವಾರಿಯಲ್ಲಿ ಇನ್ನಷ್ಟು ಮೌನವಾಗಿ ಬೆಳೆದೆ. ನನ್ನನ್ನು ಮತ್ತು ನನ್ನ ತಂಗಿ ವಡಿವಾಂಬಾಳನ್ನು ಅನವಶ್ಯಕವಾಗಿ ಮನೆಯಿಂದ ಆಚೆ ಹೋಗಲು ನಮ್ಮಮ್ಮ ಬಿಡುತ್ತಿರಲಿಲ್ಲ. ಹಾಗೆ ನೋಡಿದರೆ ಕಿಟಕಿಯ ಹತ್ತಿರವಾಗಲೀ, ಬಾಗಿಲ ಹತ್ತಿರವಾಗಲೀ ಹೆಚ್ಚು ಹೊತ್ತು ನಿಲ್ಲುವುದಕ್ಕೂ ನಮ್ಮಮ್ಮ ಬಿಡುತ್ತಿರಲಿಲ್ಲ! ನನ್ನ ತಮ್ಮ ಶಕ್ತಿವೇಲು ಹುಡುಗನಾಗಿದ್ದರಿಂದ ಅವನಿಗೆ ಹೆಚ್ಚಿನ

ಸ್ವಾತಂತ್ರ್ಯ ಇತ್ತು. ನಾವು ಹೆಣ್ಣುಮಕ್ಕಳು ಸದಾ ಮನೆಯೊಳಗೇ ಆಟವಾಡಿಕೊಳ್ಳಬೇಕಾಗಿತ್ತು. ಈ ಥರದ ಕಟ್ಟುಪಾಡಿನಲ್ಲಿ ಬೆಳೆದ ನನಗೆ ಬೇರೆಯವರೊಂದಿಗೆ ಗೆಳೆತನವೇ ಸಾಧ್ಯವಿರಲಿಲ್ಲ.



ಎಂಎಸ್ ಅವರನ್ನು ರೂಪಿಸಿದ ಮೊದಲ ಗುರು ತಾಯಿ ಷಣ್ಮುಗವಡಿವು

ನಮ್ಮ ಮನೆ ತುಂಬಾ ಚಿಕ್ಕದು. ಅದರಲ್ಲಿದ್ದದ್ದು ಎರಡೇ ಕೋಣೆಗಳು, ಅಡಿಗೆ ಮನೆ ಮತ್ತು ಅಂಗಳ. ಮೇಲೆ ತಾರಸಿಗೆ ಹೋಗಲು ಮೆಟ್ಟಿಲು. ವಯಸ್ಸಾದ ಅತ್ತೆ, ಚಿಕ್ಕಪ್ಪ, ದೊಡ್ಡಪ್ಪ ನಮ್ಮ ಜೊತೆಗೇ ಇದ್ದರು. ಹಾಗಾಗಿ ನಮ್ಮ ಮನೆ ಯಾವಾಗಲೂ ತುಂಬಿರುತ್ತಿತ್ತು. ಅದರಿಂದ ನಾವು ಗಲಾಟೆ ಮಾಡದೆ ನಿಶ್ಶಬ್ದವಾಗಿರಬೇಕಾಗಿತ್ತು. ನಮ್ಮದು ತುಂಬ ಸರಳ ಜೀವನ, ಬಡತನದ ಬದುಕು. ಬೆಳಗ್ಗೆ ಹುರಿದ ಕೊತ್ತಂಬರಿಬೀಜವನ್ನು ನೀರಲ್ಲಿ ಕುದಿಸಿ ಅದಕ್ಕೆ ಸ್ವಲ್ಪ ಹಾಲು, ಬೆಲ್ಲ ಸೇರಿಸಿ ಕುಡಿಯುತ್ತಿದ್ದೆವು. ರಾತ್ರಿಗೆ ಅನ್ನ ಹಾಗೂ ಮಜ್ಜಿಗೆ. ನನಗೆ ಮಲ್ಲಿಗೆ ಹೂವೆಂದರೆ ತುಂಬಾ ಇಷ್ಟ. ಆದರೆ ನಾವು ಮಲ್ಲಿಗೆ ಹೂವನ್ನು ದಿನಾ ದುಡ್ಡು ಕೊಟ್ಟು ಕೊಳ್ಳುವಷ್ಟು ಶ್ರೀಮಂತರಾಗಿರಲಿಲ್ಲ. ಐಸ್ ಕ್ಯಾಂಡಿಯಂತೂ ದೂರದ ಮಾತು! ವಡಿವಾ ಮತ್ತು ನಾನು ಹುಣಸೇಕಾಯಿ ಜಜ್ಜಿ, ಅದಕ್ಕೆ ಉಪ್ಪು, ಮೆಣಸಿನಕಾಯಿ ಸೇರಿಸಿ ಉಂಡೆ ಮಾಡಿ, ಅದಕ್ಕೊಂದು ಕಡ್ಡಿ ಚುಚ್ಚಿ 'ಲಾಲಿ ಪಾಪ್' ಮಾಡಿಕೊಂಡು ತಿನ್ನುತ್ತಿದ್ದೆವು! ನಮಗೆ ಯಾವುದರ ಕೊರತೆಯೂ ಕಾಡಲೇ ಇಲ್ಲ. ನಾವು ಒಬ್ಬರಿಗೊಬ್ಬರು ಜೊತೆಗಿದ್ದೆವಲ್ಲ. ಸಂಗೀತ ಕಲಿಯುವುದೇ ನಮಗೆ ಸಂತಸದ ವಿಷಯವಾಗಿತ್ತು. ಏಕೆಂದರೆ ನಾವು ಮೂರು ಮಕ್ಕಳೂ ಒಟ್ಟಿಗೇ ಕುಳಿತು ಅಭ್ಯಾಸ ಮಾಡಿಕೊಳ್ಳುತ್ತಿದ್ದೆವು. ನಾನು ಹಾಡುತ್ತಿದ್ದೆ, ವಡಿವಾ ವೀಣೆ ನುಡಿಸುತ್ತಿದ್ದಳು, ಶಕ್ತಿವೇಲು ಮೃದಂಗವನ್ನು ಇಡೀ ಕೋಣೆಯೇ ಮಾರ್ದನಿಸುವಂತೆ ನುಡಿಸುತ್ತಿದ್ದ. ಅವನು ತುಂಬಾ ಚೆನ್ನಾಗಿ ನುಡಿಸುತ್ತಿದ್ದ. ನಾನು



ಪುಟಾಣಿ ಎಂಎಸ್

ಮೃದಂಗ ನುಡಿಸುವುದನ್ನು ಅವನಿಂದಲೇ ಕಲಿತದ್ದು. ನಾವು ಮಾತಾಡುತ್ತಾ, ತಮಾಷೆ ಮಾಡಿಕೊಂಡು ಅಭ್ಯಾಸ ಮಾಡಿಕೊಳ್ಳುತ್ತಿದ್ದೆವು. ಆದರೆ ಅಮ್ಮನ ಹೆಜ್ಜೆ ಸಪ್ಪಳ ಕೇಳಿದ ಕೂಡಲೇ ತೆಪ್ಪಗಾಗುತ್ತಿದ್ದೆವು. ಅಭ್ಯಾಸ ಮಾಡುವಾಗ ಏಕಾಗ್ರತೆಯಿಲ್ಲದ, ಚಂಚಲಚಿತ್ತದ ನಡವಳಿಕೆ ಅವರಿಗೆ ಇಷ್ಟವಾಗುತ್ತಿರಲಿಲ್ಲ.



ಅಕ್ಕ ಗಾಯಕಿ, ತಂಗಿ ವಡಿವಾ ವೀಣಾವಾದಕಿ

ನಾನು ಚಿಕ್ಕ ಹುಡುಗಿಯಾಗಿದ್ದಾಗ, ಟಿವಿ ಇರಲಿ, ಸಿನಿಮಾಗಳೂ ಅಪರೂಪ. ಸಿನಿಮಾಗಳ ಬಗ್ಗೆ ಉತ್ಸಾಹ ಹಾಗೂ ಬೆರಗಿನಿಂದ ಮಾತನಾಡಿಕೊಳ್ಳುತ್ತಿದ್ದೆವು. ನಾನಂತೂ ಒಂದೇ ಒಂದು ಸಿನಿಮಾ ಕೂಡ ನೋಡಿರಲಿಲ್ಲ. ಆಗ ಹರಿಕಥೆ ಪ್ರಚಲಿತದಲ್ಲಿತ್ತು. ಸಾಯಂಕಾಲದ ಹೊತ್ತಿಗೆ ದೇವಸ್ಥಾನದ ಪ್ರಾಂಗಣದಲ್ಲೋ, ಮದುವೆ ಪೆಂಡಾಲಿನಲ್ಲೋ ಹರಿಕಥೆ ನಡೆಯುತ್ತಿತ್ತು. ಅದನ್ನು ಕೇಳಲು ತುಂಬಾ ಜನ ಸೇರುತ್ತಿದ್ದರು. ಭಾಗವತರು ಪುರಾಣ ಕಾವ್ಯಗಳನ್ನು ರಂಜನೀಯವಾಗಿ ಕೇಳುಗರ ಕಣ್ಣಿಗೆ ಕಟ್ಟುವಂತೆ ನಿರೂಪಿಸುತ್ತಿದ್ದರು. ಆ ಭಾಗವತರು ಸಾಮಾನ್ಯವಾಗಿ ಒಳ್ಳೆಯ ವಾಗ್ಮಿಗಳಾಗಿರುತ್ತಿದ್ದರು. ತಮಿಳು, ಸಂಸ್ಕೃತ, ತೆಲುಗು, ಹಿಂದಿ, ಮರಾಠಿ ಹೀಗೆ ಅನೇಕ ಭಾಷೆಗಳಲ್ಲಿ ಪಂಡಿತರಾಗಿರುತ್ತಿದ್ದರು. ಇದರಿಂದಾಗಿ ಅವರ ಕಥನಗಳು ಅದ್ಭುತವಾಗಿ, ರಮ್ಯವಾಗಿರುತ್ತಿದ್ದವು. ಅವರು ಕಾವ್ಯವನ್ನು ರಾಗವಾಗಿ, ಮನಮುಟ್ಟುವಂತೆ ಹಾಡುತ್ತಿದ್ದುದರಿಂದ ಖುಷಿ ಅನ್ನಿಸುತ್ತಿತ್ತು. ಕೆಲವು ಭಾಗವತರು ಸಂಗೀತದಲ್ಲಿ ಎಷ್ಟು ಪರಿಣತರಾಗಿದ್ದರೆಂದರೆ ಅವರ ಹರಿಕಥೆಯನ್ನು ಕೇಳಲು ಅನೇಕ ವೃತ್ತಿಪರ ಸಂಗೀತಗಾರರೂ ಬರುತ್ತಿದ್ದರು. ಸಾಮಾನ್ಯವಾಗಿ ಹರಿಕಥಾ ವಿದ್ವಾಂಸರೆಲ್ಲಾ ಗಂಡಸರು. ಆದರೆ ಈ ಕಲೆಯಲ್ಲಿ ನಿಷ್ಣಾತರಾಗಿದ್ದ ಕೆಲವು ಹೆಂಗಸರೂ ಇದ್ದರು.

ಸರಸ್ವತೀಬಾಯಿಯವರು 'ಹರಿಕಥಾ ತಾರೆ' ಎಂದೇ ಪ್ರಸಿದ್ಧರಾಗಿದ್ದರು. ಆ

ಕಾಲದ ಅನೇಕ ಕಲಾವಿದರಂತೆ ಅವರೂ ಸಹ ಮಹಾತ್ಮಾ ಗಾಂಧಿಯವರಿಂದ ಪ್ರಭಾವಿತರಾಗಿದ್ದರು. ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯರೂ ಆಗಿದ್ದರು. ಭಾರತವನ್ನು ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆಗೊಳಿಸಲು ಕಾಂಗ್ರೆಸ್ ಪಕ್ಷ ನಡೆಸಿದ ಅನೇಕ ಚಳುವಳಿಗಳ ಬಗ್ಗೆ ಅವರು ನಿರರ್ಗಳವಾಗಿ ಮಾತನಾಡುತ್ತಿದ್ದರು. ಒಮ್ಮೆ ಸರಸ್ವತೀಬಾಯಿಯವರ ಹರಿಕಥೆಯನ್ನು ಕೇಳಲು ನಮ್ಮಮ್ಮ ನನ್ನನ್ನು ಕರೆದುಕೊಂಡು ಹೋಗಿದ್ದರು. ಲಂಕೆಯ ಸಮುದ್ರತೀರದಲ್ಲಿ ರಾಮನ ಕಪಿಸೇನೆ ಬೀಡುಬಿಟ್ಟಿದ್ದು, ಅಂದಿನ ಅವರ ಹರಿಕಥೆಯ ವಸ್ತುವಾಗಿತ್ತು. ಆಗ ಇದ್ದಕ್ಕಿದ್ದ ಹಾಗೆ ರಾವಣನ ತಮ್ಮ ವಿಭೀಷಣ ಆಕಾಶದಲ್ಲಿ ಕಾಣಿಸಿಕೊಳ್ಳುತ್ತಾನೆ. ಅವನು ರಾಮನಿಗೆ ಶರಣಾಗುವುದಕ್ಕೆ ಲಂಕೆಯಿಂದ ಓಡಿ ಬಂದಿರುತ್ತಾನೆ. ಇಡೀ ದೃಶ್ಯವನ್ನು ಬಾಯಿಯವರು ತೀರಾ ತನ್ಮಯತೆಯಿಂದ ವರ್ಣಿಸಿದರು. ಆಮೇಲೆ ಕಾಮಾಚ್ ರಾಗ, ಆದಿತಾಳದಲ್ಲಿ ಒಂದು ಹಾಡು ಪ್ರಾರಂಭಿಸಿದರು. ಅದು ಇಂಗ್ಲಿಷ್ ಹಾಡು!

ದಿಸ್ ಈಸ್ ದ ಅಕೇಷನ್
ಫಾರ್ ಅವರ್ ಲಿಬರೇಷನ್
ದಿಸ್ ಈಸ್ ಕಾಂಗ್ರೆಸ್ ರಸಲ್ಯೂಷನ್
ಗಾಂಧೀಜೀಸ್ ಇನ್ಸ್ಪಿರೇಷನ್!

ತಬಲದ ಮೊರೆತಕ್ಕೆ, ಜಾಗಟೆ, ಕಂಸಾಳೆಯ ಗಡಚಿಕ್ಕಿಗೆ ಸಾಟಿಯಾಗಿ ಅವರು ಅದೆಷ್ಟು ರೊಚ್ಚಿನಿಂದ ಹಾಡುತ್ತಿದ್ದರು! ಬ್ರಿಟಿಷರು ಅರ್ಥಮಾಡಿಕೊಂಡು ಹೆದರಿ ನಡುಗಬೇಕಾದರೆ, ಇಂಗ್ಲಿಷಿನಲ್ಲಿ ಅವರು ಹಾಡಬೇಕೆಂದುಕೊಂಡಿದ್ದರೇನೋ? ಹಾಡಿನ ಕಡೆಯ ಪದ ಮೊಳಗಿದ ಕೂಡಲೇ, ತಮಿಳಿನಲ್ಲಿ ಸರಸ್ವತಿಬಾಯಿ ಗುಡುಗಿದರು, "ಹೀಗೆ ವಿಭೀಷಣ ಆಕಾಶದಿಂದ ಇಳಿದುಬಂದು, ರಾಮನ ಕಾಲಿಗೆ ಬಿದ್ದನು!" ನಮ್ಮಮ್ಮ ನನ್ನನ್ನು ಜೋರಾಗಿ ಜಿಗುಟಿದರು– ನಾನು ಹಲ್ಲು ಕಿರಿಯುವುದನ್ನು ನಿಲ್ಲಿಸಿ – ಮರ್ಯಾದೆಯಿಂದ ನಡೆದುಕೊಳ್ಳುವಂತೆ ಎಚ್ಚರಿಸಲು!

**ಹಾಡು ಹಕ್ಕಿ:–**

ಶಾಲೆಗೆ ಹೋಗುವ ಮೊದಲೇ ನನಗೆ ಓದಲು, ಬರೆಯಲು ಬರುತ್ತಿತ್ತು.


ಪ್ರಸಿದ್ಧ ಹರಿಕಥಾ ತಾರೆ ಸರಸ್ವತೀಬಾಯಿ

ನಾನು ಬೆಳಗ್ಗೆ ಬೇಗ ಎದ್ದು ಅಕ್ಕಪಕ್ಕದ ಹೆಂಗಸರು ಅಂಗಳ ತೊಳೆದು, ನೀರು ಚಿಮುಕಿಸಿ, ಸಗಣಿ ಸಾರಿಸಿ, ಅಕ್ಕಿಹಿಟ್ಟಿನಿಂದ ಸುಂದರವಾಗಿ ರಂಗೋಲಿ ಬಿಡಿಸುತ್ತಿದ್ದುದನ್ನು ನೋಡುತ್ತಾ ನಿಲ್ಲುತ್ತಿದ್ದೆ. ಒಂದು ದಿನ ವಯಸ್ಸಾದವರೊಬ್ಬರು



ಸರಸ್ವತೀಬಾಯಿಯವರ ಹರಿಕಥೆ ಕೇಳುತ್ತಿರುವ ಟಿ ಸದಾಶಿವಂ, ಸಿ ರಾಜಗೋಪಾಲಚಾರಿ ಮೊದಲಾದವರು


ರಸ್ತೆಯಲ್ಲಿ ನಡೆದುಕೊಂಡು ಬಂದು ನನ್ನನ್ನು ದಾಟಿಕೊಂಡು ಮುಂದಕ್ಕೆ ಹೋದರು. ಕಾವಿ ಪಂಚೆ, ಹಣೆ, ತೋಳುಗಳ ಮೇಲೆಲ್ಲಾ ವಿಭೂತಿ ಪಟ್ಟಿ, ಕುತ್ತಿಗೆಗೆ ರುದ್ರಾಕ್ಷಿಮಾಲೆ ಧರಿಸಿದ್ದರು. ಕೈಯಲ್ಲಿ ಒಂದು ತಾಮ್ರದ ಚೊಂಬು, ಕಮಂಡಲ ಹಿಡಿದಿದ್ದ ಅವರು ಧರ್ಮಬೀರುವೂ, ಉದಾರಹೃದಯಿಯೂ ಆಗಿ ಕಾಣುತ್ತಿದ್ದರು. ಯಾಕೋ ಅವರು ನನಗೆ ತುಂಬಾ ಇಷ್ಟವಾದರು. ಅಮೇಲೆ ಅವರನ್ನು ಪ್ರತಿದಿನಾ ನೋಡುತ್ತಿದ್ದೆ. ದಿನಾ ಸ್ನಾನ ಮುಗಿಸಿಕೊಂಡು ಅದೇ ಮುಗುಳುನಗೆಯೊಂದಿಗೆ ನನ್ನ ಮುಂದೆ ಹಾದು ಹೋಗುತ್ತಿದ್ದರು. ಒಂದು ದಿನ ನನ್ನ ಮುಂದೆ ನಿಂತು "ಮಗು, ನಿನಗೆ ಹಾಡು ಹೇಳಿಕೊಡಬೇಕೆನಿಸಿದೆ, ಕಲಿಯುತ್ತೀಯಾ?" ಎಂದು ಕೇಳಿದರು. ಖುಷಿಯಿಂದ ನಾನು ತಲೆಯಾಡಿಸಿದೆ. ಅಲ್ಲೇ ಹೊಸ್ತಿಲ ಮೇಲೆ ಕುಳಿತು, ಕಣ್ಮುಚ್ಚಿ ಕೈ ಜೋಡಿಸಿ, ಒಂದು ಶ್ಲೋಕ —'ಘೃತಗುಡಪಾಯಸಂ' ಶುರುಮಾಡಿದರು. ನಾನು ಹಾಗೇ ಮಾಡಿದೆ. ನನಗೆ ಅವರು ಹೇಳಿಕೊಟ್ಟದ್ದು ವೇದಭಾಷೆ ಸಂಸ್ಕೃತವಲ್ಲ, ಮಾತೃಭಾಷೆ ತಮಿಳೂ ಅಲ್ಲ. 'ಗ್ರಂಥ' ಎಂಬ ಭಾಷೆ ಹೇಳಿಕೊಟ್ಟರು. ಅದು ಎಷ್ಟು ಹಳೆಯದೆಂದರೆ ಯಾರೂ ಅದನ್ನು ಈಗ ಉಪಯೋಗಿಸುವುದೇ ಇಲ್ಲ. ಎಲ್ಲೋ ಕೆಲವು ಹಳೆಯ ಕೃತಿಗಳಲ್ಲಿ ನೀವು ಅದನ್ನು ನೋಡಬಹುದು. ಅಥವಾ ದೇವಸ್ಥಾನದ ಗೋಡೆಗಳ ಮೇಲೆ. ಇಲ್ಲವೇ ಲೆಕ್ಕ ಪತ್ರ ಬರೆಯುತ್ತಿದ್ದ ಹಳೆಯ ಕಾಲದ ತಾಮ್ರಫಲಕಗಳಲ್ಲಿ ಅದನ್ನು ನೋಡಬಹುದು.

ನನ್ನ ಮನೆಯವರೆಲ್ಲಾ ಅವರು ಪಾಠ ಹೇಳಿಕೊಡುವುದನ್ನು ಆಶ್ಚರ್ಯದಿಂದ ನೋಡುತ್ತಿದ್ದರು. ಬಹುಶ: ಒಬ್ಬ ಬಿಳಿಗಡ್ಡದ ಮುದುಕ ಒಂದು ಪುಟ್ಟ ಹುಡುಗಿಗೆ ಪಾಠ ಹೇಳಿಕೊಡುವುದು ಸೋಜಿಗವಾಗಿ ತೋರಿರಬೇಕು. ಆದರೆ ಯಾರೂ ನಮ್ಮನ್ನು

ತಡೆಯಲಿಲ್ಲ. ಆ ಕಾಲದಲ್ಲಿ ಜನರಿಗೆ ಪಂಡಿತರ ಬಗ್ಗೆ ತುಂಬಾ ಗೌರವವಿತ್ತು. ಅವರು ಎಷ್ಟೇ ಬಡವರಾಗಿದ್ದರೂ, ಅಲೆಮಾರಿಗಳಾಗಿದ್ದರೂ ಜನ ಅವರನ್ನು ಗೌರವದಿಂದಲೇ ಕಾಣುತ್ತಿದ್ದರು. ಆದರೆ ವಡಿವಾ ಮತ್ತು ಶಕ್ತಿವೇಲುವಿಗೆ ಅವರನ್ನು ನೋಡಿದ ಕೂಡಲೇ ನಗು ತಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರಿಬ್ಬರೂ ದಿನಾ ನನ್ನನ್ನು ಛೇಡಿಸುತ್ತಿದ್ದರು. ಶಕ್ತಿವೇಲು ಅವರನ್ನು "ಮುದಿ ಘೃತಗುಡಪಾಯಸಂ" ಎಂದು ಹಾಸ್ಯ ಮಾಡುತ್ತಿದ್ದ. ಕೆಲವು ದಿನಗಳ ನಂತರ ಅವರು ತೀರ್ಥಯಾತ್ರೆಗೆಂದು ಬನಾರಸಿಗೆ ಹಿಂತಿರುಗಿ ಹೋದರು. ತೀರಾ ಅಪರಿಚಿತ ಆ ವಯೋವೃದ್ಧರೇ ನನ್ನ ಮೊದಲ ಗುರು. 'ಗ್ರಂಥ' ನಾನು ಕಲಿತ ಮೊದಲ ಭಾಷೆ!

ಇದಾದನಂತರ ನಾನು ಶಾಲೆಗೆ ಸೇರಿಕೊಂಡೆ. ಐದನೇ ತರಗತಿಯವರೆಗೆ ಓದಿದೆ. ಆದರೆ ಶಿಕ್ಷಕರೊಬ್ಬರು ಕಾರಣವೇ ಇಲ್ಲದೆ ಒಂದು ದಿನ ನನಗೆ ಸಿಕ್ಕಾಪಟ್ಟೆ ಹೊಡೆದುಬಿಟ್ಟರು. ಹೊಡೆತದ ಹೆದರಿಕೆಯಿಂದ ನನ್ನ ನಾಯಿಕೆಮ್ಮು ಮತ್ತಷ್ಟು ಹೆಚ್ಚಾಯಿತು. ನಮ್ಮ ಮನೆಯ ಹಿರಿಯರು ನನ್ನ ವಿದ್ಯಾಭ್ಯಾಸವನ್ನು ಅಲ್ಲಿಗೇ ಮೊಟಕುಗೊಳಿಸಿದರು. ಇಲ್ಲದಿದ್ದರೆ ನಾನು ಮುಂದೆ ಓದುತ್ತಿದ್ದೆ. ಶಾಲೆ ತಪ್ಪಿದ್ದರಿಂದ ನನಗೆ ಬೇಸರವಾಗಿತ್ತಾ? ಇಲ್ಲವೆನ್ನಿಸುತ್ತದೆ. ಶಿಕ್ಷಕರು, ಸಹಪಾಠಿಗಳನ್ನು ಕಂಡರೆ ನನಗೆ ಹೆದರಿಕೆಯಾಗುತ್ತಿತ್ತು. ಮನೆಯಲ್ಲಿ ನಾನು ನೆಮ್ಮದಿಯಾಗಿದ್ದೆ. ಅಲ್ಲಿಗೆ ನನ್ನ ಶಿಕ್ಷಣ ಮುಗಿಯಿತು ಎಂದುಕೊಳ್ಳಬೇಡಿ. ನನ್ನ ತಾಯಿಯಿಂದ ಕಲಿಯುವುದೇ ಬೇಕಾದಷ್ಟಿತ್ತು. ನನ್ನ ಮುಂದೆ ಕುಳಿತು ಅವಳು ನನಗೆ ಎಂದೂ ಪಾಠ ಹೇಳಿಕೊಟ್ಟಿಲ್ಲ. ಆದರೆ ನಿಜವಾಗಿ ಅವಳೇ ನನ್ನ ಮೊದಲ

ತಾಯಿ ಷಣ್ಮುಗವಡಿವು, ವಡಿವಾ ಮತ್ತು ಕುಟುಂಬದ ಇತರ ಸದಸ್ಯರೊಂದಿಗೆ ಎಂಎಸ್



ಗುರು. ಅವಳು ಬೇರೆಯವರಿಗೆ ಪಾಠ ಹೇಳಿಕೊಡುವಾಗ, ಅಥವಾ ಅವಳು ಸ್ವತಃ ಅಭ್ಯಾಸ ಮಾಡಿಕೊಳ್ಳುತ್ತಿದ್ದಾಗ, ನಾನು ಕೇಳಿ ಕಲಿತದ್ದೇ ಹೆಚ್ಚು. ಹಾಗೆಯೇ ಅವಳು ವೀಣೆ ನುಡಿಸುವಾಗ ಜೊತೆಗೆ ನಾನೂ ಹಾಡುತ್ತಿದ್ದೆ. ನನಗೆ ಸಂಗೀತ ಪಾಠಕ್ಕೆಂದು ಶ್ರೀನಿವಾಸ ಅಯ್ಯಂಗಾರ್ ಎಂಬ ಗುರುಗಳನ್ನು ಗೊತ್ತುಮಾಡಿದ್ದರು. ಅವರು ತಮ್ಮ ಸಹೋದರನ ಜೊತೆ ಸಂಗೀತ ಕಾರ್ಯಕ್ರಮ ನೀಡುತ್ತಿದ್ದರು. ಒಂದು ಒಳ್ಳೆಯ ಮುಹೂರ್ತ ನೋಡಿ, ಮನೆಯಲ್ಲೇ ಸಣ್ಣದಾಗಿ ಪೂಜೆ ಮಾಡಿ, ಕಾಯಿ ಒಡೆದರು. ನಾನು ನನ್ನ ಗುರುಗಳಿಗೆ ನಮಸ್ಕರಿಸಿ ಚಾಪೆಯ ಮೇಲೆ ಕುಳಿತೆ. ಗುರುಗಳು ತಂಬೂರಿ ಶ್ರುತಿಯನ್ನು ಪರೀಕ್ಷಿಸಿ ನೋಡಿದರು. ನಂತರ ತಂಬೂರಿ ಮೀಟಿಕೊಂಡು ಸ್ಪಷ್ಟವಾದ ಗಟ್ಟಿದನಿಯಲ್ಲಿ 'ಸರಿಗಮಪದನಿಸ' ಶುರು ಮಾಡಿದರು. ಅವರ ಧ್ವನಿ ನಿಂತ ಕೂಡಲೇ ನಾನೂ ಮೂರು ಕಾಲದಲ್ಲಿ ಹೇಳುತ್ತಿದ್ದೆ. ಅವರು ತುಂಬಾ ಆಸಕ್ತಿಯಿಂದ ಕಲಿಸುತ್ತಿದ್ದನ್ನು ನೋಡಿದರೆ ನಾನು ಚೆನ್ನಾಗಿ ಕಲಿಯುತ್ತಿದ್ದೆ ಅಂತ ಕಾಣುತ್ತೆ! ಹೊಸದಾಗಿ ಸಂಗೀತ ಕಲಿಯುವವರಿಗೆ ಕಲಿಸುವ ಸರಳೆವರಸೆ, ಅಲಂಕಾರ, ಗೀತೆಗಳನ್ನು ಹೇಳಿಕೊಡುವುದರ ಮೂಲಕ ಅವರು ನನಗೆ ಸಂಗೀತದ ಭದ್ರ ಬುನಾದಿಯನ್ನು ಹಾಕಿಕೊಟ್ಟರು. ಆದರೆ ದುರಾದೃಷ್ಟ, ಪಾಠ ತುಂಬಾ ದಿನ ಮುಂದುವರೆಯಲಿಲ್ಲ. ಯಾವುದೋ ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗಿದ್ದವರು ಮರಳಿ ಬರಲೇ ಇಲ್ಲ. ಅಲ್ಲೇ ತೀರಿಕೊಂಡರು. ಇದು ಖಂಡಿತ ನನ್ನ ದುರದೃಷ್ಟ. ಆದರೆ ಈ ಘಟನೆಯಿಂದ ಸಂಗೀತದ ಮೇಲಿನ ನನ್ನ ಮೋಹವೇನೂ ಕಡಿಮೆಯಾಗಲಿಲ್ಲ. ತುಂಬಾ ತನ್ಮಯತೆಯಿಂದ ಗಂಟೆಗಟ್ಟಲೆ ಸಂಗೀತಾಭ್ಯಾಸ ಮಾಡುತ್ತಿದ್ದೆ. ಸಂಗೀತವನ್ನೇ ಒಂದು ಆಟಮಾಡಿಕೊಂಡಿದ್ದೆ. ಮೊದಲು ತಂಬೂರಿಯನ್ನು ಚೆನ್ನಾಗಿ ಶ್ರುತಿಮಾಡಿಕೊಳ್ಳುತ್ತಿದ್ದೆ. ತಂಬೂರಿಯ ಝೇಂಕಾರದಲ್ಲಿ ಮೈಮರೆಯುತ್ತಿದ್ದೆ. ಕಣ್ಣುಮುಚ್ಚಿ ಅದನ್ನೇ ಧ್ಯಾನಿಸುತ್ತಾ ಬೇರೆಯದೇ ಆದ ಪ್ರಪಂಚಕ್ಕೆ ಹೋಗಿಬಿಡುತ್ತಿದ್ದೆ. ತಂಬೂರಿ ಮೀಟುವುದನ್ನು ನಿಲ್ಲಿಸಿ ಹಾಡುತ್ತಿದ್ದೆ. ಮತ್ತೆ ತಂಬೂರಿ ಮೀಟಿ ನನ್ನ ಶ್ರುತಿ ಸರಿಯಾಗಿದೆಯೋ ಇಲ್ಲವೋ ನೋಡಿಕೊಳ್ಳುತ್ತಿದ್ದೆ. ಮನೆಕೆಲಸ ಮಾಡುತ್ತಾ ಮಧ್ಯೆ ಮಧ್ಯೆ ಇಡೀ ದಿನ ತಂಬೂರಿ ಮೀಟಿಕೊಳ್ಳುತ್ತಾ ನನ್ನ ಶ್ರುತಿಯನ್ನು ಒಂದೇ ಸ್ಥಾಯಿಯಲ್ಲಿ ಸರಿಯಾಗಿ ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದೆ.

ವೇದಿಕೆ ಮೇಲೆ ಹಾಡುವುದು ನನಗೆ ತುಂಬಾ ಸಹಜವಾಗಿತ್ತು. ಬಹುಷಃ ನನಗೆ ಹೇಳಿ ಮಾಡಿಸಿದ್ದು ಅದೊಂದೇ ವ್ಯ[illegible] ಎನಿಸುತ್ತದೆ. ನಾನು ಮೊದಲ ಸಲ ಜನರ ಮುಂದೆ ಕಾರ್ಯಕ್ರಮ ನೀಡಿದ ಸಂದರ್ಭ ಕೇಳಿದರೆ ನಿಮಗೆ ನಗು ಬರುತ್ತದೆ. ನಮ್ಮಮ್ಮ ಮನೆ ಹತ್ತಿರದ ಶಾಲೆಯೊಂದರಲ್ಲಿ ಕಛೇರಿ ಮಾಡುತ್ತಿದ್ದರು. ನಾನು ಹಿತ್ತಲಲ್ಲಿ ಕುಳಿತು ಮಣ್ಣಿನಲ್ಲಿ ಅರಮನೆ ಕಟ್ಟುತ್ತಿದ್ದೆ. ನನ್ನ ಮಾವನೋ ಅಥವಾ ಇನ್ನ್ಯಾರೋ ಬಂದು ನನ್ನನ್ನು ಎತ್ತಿಕೊಂಡು, ನನ್ನ ಲಂಗದ ಧೂಳು ಕೊಡವಿ, ಕೈತೊಳೆಸಿ, ನೇರವಾಗಿ ವೇದಿಕೆಗೆ ಕರೆದುಕೊಂಡು ಹೋದರು. ಆ ಹಜಾರದಲ್ಲಿ ಸುಮಾರು ಐವತ್ತು ಜನ ಸೇರಿದ್ದರು. ಆ ದಿನಗಳಲ್ಲಿ ಅದೇ ದೊಡ್ಡ ಗುಂಪು! ಆದರೆ ಜನರ ಮುಂದೆ ನನ್ನ ತಾಯಿ ನುಡಿಸುವುದನ್ನು ನೋಡಿ ನನಗೆ ಅಭ್ಯಾಸವಾಗಿತ್ತು. ಅವಳ ಪಕ್ಕದಲ್ಲಿ ನನ್ನನ್ನು ಕೂರಿಸಿದರು. ನಮ್ಮಮ್ಮ ನನಗೆ ಹಾಡಲು ಹೇಳಿದರು. ಯಾವುದೇ ಹಿಂಜರಿಕೆಯೂ ಇಲ್ಲದೆ ತಕ್ಷಣ ಒಂದೆರಡು ಹಾಡು ಹೇಳಿದೆ. ಜನರ ಮೆಚ್ಚುಗೆಯ ನಗು ಹಾಗೂ ಚಪ್ಪಾಳೆ ಇವುಗಳ ಮಹತ್ವ ಅರಿಯುವ ವಯಸ್ಸು